PW –1 .

Dated: 25–05–2023.

ಸಾಕ್ಷಿಯನ್ನು ಕರೆಯಿಸಿ ಶಪತವನ್ನು ಬೋಧಿಸಿದೆ.

ಪಾಟೀ ಸವಾಲುಃ 1 ನೇ ಪ್ರತಿವಾದಿ ಪರವಾಗಿ ಶ್ರೀ ಬಿ ಬಿ ವಿ ವಕೀಲರಿಂದ

ದಾವೆ ಬರೆಯಲು ಮಾಹಿತಿಯನ್ನು ನಾನೇ ನೀಡಿದ್ದೇನೆ . ನನ್ನ ಪ್ರಮಾಣ ಪತ್ರವನ್ನು ಬರೆಯಲು ಮಾಹಿತಿ ನಾನೇ ನೀಡಿದ್ದೇನೆ . ದಾವಾ ಆಸ್ತಿ ಸರ್ವೆ ನಂಬರ ಹೇಳಲು ಬರುವುದಿಲ್ಲ . ಯಾವ ಯಾವ ಆಸ್ತಿಗಳು ಯಾರ ಯಾರ ಹೆಸರಿಗೆ ಇದೆ ಅಂತಾ ನನಗೆ ಹೇಳಲು ಬರುವುದಿಲ್ಲ . ಸರ್ವೆ 61/2 1 ಎಕರೆ 9 ಗುಂಟೆ ಜಮೀನು ಮೃತ ಚಂದ್ರಪ್ಪ ಮತ್ತು 4 ನೇ ಪ್ರತಿವಾದಿ ಹೆಸರಿಗೆ ಇದೆ ಅಂದರೆ ಸರಿ . ಸರ್ವೆ 67/3+4 ಎ ಇದನ್ನು ಗಂಗವ್ವ ಹೆಸರಿಗೆ ಇದೆ ಅಂದರೆ ಸರಿ . ಸರ್ವೆ ನಂ . 67/8+9 ಎ/1 ಚಂದ್ರಪ್ಪನ ಹೆಸರಿಗೆ ಇದೆ ಅಂದರೆ ಸರಿ . ಸರ್ವೆ ನಂ 67/8+9b/2+10+11+12 ಕ್ಷೇತ್ರ 2 ಎಕರೆ 8 ಗುಂಟೆ ಆಸ್ತಿ ನನ್ನ ಮತ್ತು 1 ನೇ ಪ್ರತಿವಾದಿಯ ಹೆಸರಿಗೆ ಇದೆ ಅಂದರೆ ಸರಿಯಲ್ಲ . ಉಳಿದ ಕ್ಷೇತ್ರ 3 ನೇ ಪ್ರತಿವಾದಿಯ ನಾಗಪ್ಪ ಹೆಸರಿಗೆ ಇದೆ ಅಂದರೆ ಸರಿ . ದಾವಾದ ಆಸ್ತಿ ಚೆಕ ಬಂದಿ ನನಗೆ ಹೇಳಲು ಬರುವುದಿಲ್ಲ . ನಮ್ಮ ಘರಾನೆ ಮನೆ ನಂಬರ ನನಗೆ ಹೇಳಲು ಬರುವುದಿಲ್ಲ .

2. ಜಿಪಿ ನಂ 132/1ಎ ಮನೆ ಮತ್ತು ಖುಲ್ಲಾ ಜಾಗೆ ಪುಂಡಲಿಕ ಅಂದರೆ 1 ನೇ ಪ್ರತಿವಾದಿಯ ಹೆಸರಿಗೆ ಇದೆ ಅಂದರೆ ಸರಿ . ಜಿ ಪಿ 1157 ಮನೆ ನನ್ನ ತಂದೆ ಚಂದ್ರಪ್ಪ ಹೆಸರಿಗೆ ಇದೆ ಅಂದರೆ ಸರಿ . ಸರ್ವೇ ನಂ 67/3+4ಎ ಕ್ಷೇತ್ರ ಆಸ್ತಿಯು 2 ನೇ ಪ್ರತಿವಾದಿ ಗಂಗವ್ವ ಕಂಬಜಾದಲ್ಲಿ ಇದೆ ಅಂದರೆ ಸರಿಯಲ್ಲ . ನನ್ನ ಕಬಜಾದಲ್ಲಿ ಇದೆ . ಗಂಗಪ್ಪ ನೋಂದಾದ ಬಕ್ಷೀಸ ಪತ್ರ ಮೂಲಕ ಸದರಿ ಆಸ್ತಿಯನ್ನು 2 ನೇ ಪ್ರತಿವಾದಿ ಗಂಗವ್ವಳಿಗೆ ದಾನ ನೀಡಿದ್ದಾರೆ ಅಂದರೆ ಸರಿಯಲ್ಲ . ಸದರಿ ಜಮೀನಲ್ಲಿ 2 ನೇ ಪ್ರತಿವಾದಿ ಅರ ಸಿ ಸಿ ಮನೆ ಕಟ್ಟಿದ್ದಾರೆ ಅಂದರೆ ಸರಿಯಲ್ಲ . ಅವರು ತನ್ನ ಗಂಡನ ಜಮೀನಿನದ ಬಂದ ಆದಾಯದಲಿಲ ಸದರಿ ಅರ ಸಿ ಸಿ ಮನೆ ಕಟ್ಟಿದ್ದಾರೆ ಅಂದರೆ ಸರಿಯಲ್ಲ , ಸದರಿ ಮನೆಗೆ ಅವರ ಕಬಜಾದಲ್ಲಿ ಇದೆ ಅಂದರೆ ಸರಿಯಲ್ಲ . ನನ್ನ ತಂದೆ ಚಂದ್ರಪ್ಪ ತೀರಿಕೂಂಡಿದ್ದಾರೆ . 2020 ನೇ ಸಾಲಿನಲ್ಲಿ ಮೃತ ಆಗಿದ್ದಾರೆ ಅಂದರೆ ಸರಿ . ನಮ್ಮ ತಂದೆಗೆ ನಾನು ಮತ್ತು 1 ನೇ ಪ್ರತಿವಾದಿ ಇಬ್ಬರೇ ವಾರಸುದಾರರು ಅಂದರೆ ಸರಿ . ಚಂದ್ರಪ್ಪನ ಹೆಂಡತಿ ನಾಗವ್ವ ಈ ಮೊದಲೇ ತೀರಿಕೂಂಡಿದ್ದಾರೆ ಅಂದರೆ ಸರಿ . ದಾವಾದ ಆಸ್ತಿಗಳು ಪಿತ್ರಾರ್ಜಿತ ಆಸ್ತಿಗಳು ಅಲ್ಲ ಅಂತಾ ಸೂಚಿಸುವುದು ಸರಿಯಲ್ಲ . ದಾವಾದ ಆಸ್ತಿಯಲ್ಲಿ ಇಲ್ಲಿವರಗೂ ನನ್ನ ಮತ್ತು 1 ನೇ ಪ್ರತಿವಾದಿ ಪುಂಡಲಿಕ ನಡುವೆ ಪಾಲು ಆಗಿಲ್ಲ ಅಂಂತಾ ಸುಳ್ಳು ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ . ದಾವಾದ ಆಸ್ತಿಗಳು ಚಂದ್ರಪ್ಪನ ಹೆಸರಿಗೆ ಬಂದಿದ ಆಸ್ತಿಗಳು ಅಂದರೆ ಸರಿ .

ಚಂದ್ರಪ್ಪ ಅವರ ಅಣ್ಣ – ತಮ್ಮಂದಿರು ನಡುವೆ ವಾಟ್ನಿ ಮಾಡಿಕೊಂಡಾಗ ಚಂದ್ರಪ್ಪನ ಪಾಲಿಗೆ ಅಸ್ತಿ ಬಂದಿತ್ತು ಅಂದರೆ ಸರಿ . ಜಿ ಪಿ ನಂ 1157 ಕೆಂಪು ಹಂಚಿನ ಮನೆ ಚಂದ್ರಪ್ಪನ 13-04-1987 ರಂದು ಖರೀದಿ ಮಾಡಿದ್ದಾರೆ ಅಂದರೆ ಸರಿಯಲ್ಲ .ಜಿ ಪಿ ನಂ 132/1/ಎ ಕೂಡಾ ಚಂದ್ರಪ್ಪನೆ 1975 ರಲ್ಲಿ ಖರೀದಿ ಮಾಡಿದ್ದರು ಅಂದರೆ ಸರಿಯಲ್ಲ . ನಾನು ಯಾವುದೇ ಕೆಲಸ ಮಾಡುತ್ತಿರಲಿಲ್ಲ ಸೋಮಾರಿ ಆಗಿ ಅಡ್ಡಾಡುತ್ತಿದ್ದೆ ಅಂದರೆ ರೈತಾಪಿ ಕೆಲಸ ಮಾಡುತಿದ್ದೆ . ನಾನು ಮನೆ ಜವಾಬದಾರಿ ನೋಡಿಕೊಳ್ಳುತ್ತಿರಲಿಲ್ಲ ಅಂದರೆ ನನ್ನ ತಂದೆ ನೋಡಿಕೊಳುತ್ತಿದ್ದರು . ಮೇ 2009 ರಲ್ಲಿ ನಾನು ನನ್ನ ತಂದೆಗೆ ದಾವಾದ ಆಸ್ತಿ ವಾಟ್ನಿ ಮಾಡಿಕೊಡುವಂತೆ ಕೇಳಿದ್ದೆ ಅಂದರೆ ಸರಿಯಲ್ಲ . ನಮ್ಮ ತಂದೆಗೆ ನಾನು ಪಾಲು ಕೊಡುವಂತೆ ಒತ್ತಡ ನೀಡಿದ್ದೆ ಅಂದರೆ ಸರಿಯಲ್ಲ . ಸರ್ವೇ ನಂ 67/8+9 ಬ ಆಸ್ತಿ ನನಗೆ ಮತ್ತು 1 ನೇ ಪ್ರತಿವಾದಿಗೆ ಸಮನಾಗಿ ಪಾಲು ಮಾಡಿ , ನನ್ನ ತಂದೆ ನೀಡಿದ್ದಾರೆ ಅಂದರೆ ಸರಿಯಲ್ಲ . ಪಾಲು ವಿಭಾಗದ ಪ್ರಕಾರ ಎಮ ಅರ ನಂ 16/2009- 10 ಮಂಜೂರು ಆಗಿದೆ ಅಂದರೆ ಸರಿಯಲ್ಲ .ನನ್ನ ಹೆಸರು ಕೂಡಾ ಪಹಣಿಯಲ್ಲಿ ದಾಖಲಾಗಿದೆ ಅಂದರೆ ಸರಿಯಲ್ಲ . ಮನೆಯಲ್ಲಿ ಕೂಡಾ ಪೂರ್ವಬಾಗದಲ್ಲಿ ನನಗೆ ನೀಡಿದ್ದಾರೆ ಅಂದರೆ ಸರಿಯಲ್ಲ . ನಾನು ಸದರಿ ಪಾಲಿಗೆ ಒಪ್ಪಕೊಂಡಿದ್ದೇನೆ ಅಂದರೆ ಸರಿಯಲ್ಲ .

1 ವರ್ಷ ನಂತರ ನಾನು ತಂಟೆ ಮಾಡಲು ಪ್ರಾರದಂಭ ಮಾಡಿದ್ದೆ ಅಂದರೆ ಸರಿಯಲ್ಲ . ಅ. ನಂ 3 ರಿಂದ 5 ಆಸ್ತಿಗಳಲ್ಲಿ ನಾನು ನಂತರದಲ್ಲಿ ತಕರಾರು ಮಾಡಿದ್ದೆ ಅಂದರೆ ಸರಿಯಲ್ಲ . ಆಗ ನನ್ನ ತಂದೆ ಜಮೀನಿನಲ್ಲಿ ಕೂಡಾ ಎರಡೂ ಹಿಸೆ್ಸ ಮಾಡಿಕೊಂಡಿದ್ದಾರೆ ಅಂದರೆ ಸರಿಯಲ್ಲ . ನನಗೆ ಒಂದು ಹಿಸೆ ಮತ್ತು ಪುಂಡಲಿಕನಿಗೆ ಒಂದು ಹಿಸೆ ಮಾಡಿದ್ದಾರೆ ಅಂದರೆ ಸರಿಯಲ್ಲ .

3. ಸರ್ವೇ ನಂ 67/3+4 ಎ ಯನ್ನು 31 ಗುಂಟೆ ನನ್ನ ತಂದೆ ಚಂದ್ರಪ್ಪ ಇಟ್ಟುಕೂಂಡಿದ್ದರು ಅಂದರೆ ನನಗೂ ಕೂಡಾ ಅರ್ಧ ಹಿಸೆ ಇದೆ . ಎರಡನೇ ಬಾರೀ ನಮ್ಮ ಕುಟುಂಬದಲ್ಲಿ ಪಾಲು ಆಗಿದೆ ಅಂದರೆ ಸರಿಯಲ್ಲ . ಎರಡನೇ ಬಾರೀ ಪಾಲು ಆದ ನಂತರ ನನ್ನ ಮತ್ತು ಪುಂಡಲೀಕನ ಹೆಸರುದಾವಾದ ಆಸ್ತಿಗಳಲ್ಲಿ ದಾಖಲಾಗಿದೆ ಅಂದರೆ ಸರಿಯಲ್ಲ . ಪಹಣಿಯಲ್ಲಿ ನಮ್ಮ ಹೆಸರು ಹಚ್ಚುಕೂಳ್ಳುವ ಜವಾಬದಾರಿ ನಮ್ಮದು ಇತ್ತು ಅಂದರೆ ಪಾಲು ಆಗಿಲ್ಲ . ಆದರೇ ನಾನು ಪೂರ್ಣಗೂಳಿಸಲಿಲ್ಲ ಅಂದರೆ ಸರಿಯಲ್ಲ . ನಾನು ಮತ್ತು ಪುಂಡಲಿಕ ನನ್ನ ತಂದೆಯನ್ನು ನೋಡಿಕೂಳ್ಳಲಿಲ್ಲ ಅಂದರೆ ಸರಿಯಲ್ಲ . ನನ್ನ ತಂದೆಗೆ ಹೂಟ್ಟೆ – ಬಟ್ಟೆಗೆ ಯಾವುದೇ ವ್ಯವಸ್ಥೆ ಮಾಡಲಿಲ್ಲ ಅಂದರೆ ಸರಿಯಲ್ಲ .

ಆ ಕಾಲಕ್ಕೆ 2 ನೇ ಪ್ರತಿವಾದಿ ಗಂಗವ್ವಳೇ ನನ್ನ ತಂದೆಗೆ ಪಾಲನೆ ಪೋಷನೆ ಮಾಡುತ್ತಿದ್ದರು ಅಂದರೆ ಸರಿಯಲ್ಲ . 2 ನೇ ಪ್ರತಿವಾದಿ ಗಂಗವ್ವಳ ಗಂಡನ ಮನೆ ಬೆಳವಡಿಯಲ್ಲಿ ಇದೆ ಅಂದರೆ ಸರಿ . ಗಂಗವ್ವಳ ಗಂಡನ ಮನೆ ಹೊಲ – ಮನೆ ಬೆಳವಡಿಯಲ್ಲಿ ಇದೆ ಅಂದರೆ ಸರಿ . ನನ್ನ ತಂದೆ ಗಂಗಪ್ಪನನ್ನು ಗಂಗವ್ವಳನ್ನು ನೋಡಿಕೊಳ್ಳುತ್ತಿದ್ದರು ಅಂದರೆ ಸರಿಯಲ್ಲ . ಈ ಕಾರಣಕ್ಕಾಗಿ ಸರ್ವೇ ನಂ 67/3+4 ಎ ಆಸ್ತಿ 31 ಗುಂಟೆಯನ್ನು ನಮ್ಮ ತಂದೆ 2 ನೇ ಪ್ರತಿವಾದಿಗೆ ಬಕ್ಷೀಸ ಮಾಡಿಕೊಟ್ಟಿದ್ದಾರೆ ಅಂದರೆ ಸರಿಯಲ್ಲ . ಚಂದ್ರಪ್ಪನ ಸೇವೆಯನ್ನು 2 ನೇ ಪ್ರತಿವಾದಿ ಮಾಡಿಕ ಕಾರಣ , ಅಕೆಗೆ ದಾನ ಪತ್ರ ಮಾಡಿಕೊಂಡಿದ್ದಾರೆ ಅಂದರೆ ಸರಿಯಲ್ಲ . ಸದರಿ ಬಕೀಸ ಪತ್ರ ನೋಂದ ಆಗಿದೆ ಅಂದರೆ ಅದೂ ಖೊಟ್ಟಿ ಬಕ್ಷೀಸ ಪತ್ರ ಇರುತ್ತದೆ . ಬಕ್ಷೀಸ ಪತ್ರದ ಅದಾರದ ಮೇರೆಗೆ ಎಂ ಅರ ನಂ 40/2016 ದಾಖಲಾಗಿದೆ ಅಂದರೆ ಸರಿಯಲ್ಲ . 2 ನೇ ಪ್ರತಿವಾದಿ ಹೆಸರು ಸದರಿ ಆಸ್ತಿ ಪಹಣಿ ಪತ್ರಿಕೆಯಲ್ಲಿ ದಾಖಲಾಗಿದೆ ಅಂದರೆ ಸರಿಯಲ್ಲ . 31 ಗುಂಟೆ ಆಸ್ತಿ ಬಕ್ಷೀಸ ಪತ್ರದ ಆಧಾರದ ಮೇರೆಗೆ ಗಂಗವ್ವ ಕಬಜಾದಲ್ಲಿ ಇದ್ದಾರೆ ಅಂದರೆ ಸರಿಯಲ್ಲ . ಬಕ್ಷೀಸ ಪತ್ರದ 2 ವರ್ಷಗಳ ನಂತರ ಎರಡೂ ಕಟ್ಟಡಗಳು 2 ನೇ ಪ್ರತಿವಾದಿ ಕಟ್ಟಿದ್ದಾರೆ ಅಂದರೆ ಸರಿಯಲ್ಲ . ನಾನು ಯಾವುದೇ ತಕಾರನ್ನು ಕೂಡಾ ಮಾಡಿಲ್ಲ ಅಂದರೆ ಸರಿಯಲ್ಲ . ಎರಡೂ ಮನೆಗಳು ಕಬಳಿಸಬೇಕು

ಅಂತಾ ನಾನು ಸುಳ್ಳು ಸಾಕ್ಷಿ ನುಡಿಯುತ್ತಿದದೇನೆ ಅಂದರೆ ಸರಿಯಲ್ಲ . ದಾವಾದ ಆಸ್ತಿಗಳು ನಮ್ಮ ಘರಾನೆಗೆ ಸಂಬಂಪಟ್ಟಿದ್ದು ಅಲ್ಲ , ಅದೂ ಗಂಗವ್ವಳ ಸ್ವಂತ ಆಸ್ತಿ ಅಂದರೆ ಸರಿಯಲ್ಲ . ಹೀಗಾಗಿ ಸದರಿ ಆಸ್ತಿಗಳಲ್ಲಿ ನನಗೆ ಪಾಲು ಇರುವುದಿಲ್ಲ ಅಂದರೆ ಸರಿಯಲ್ಲ . ಗಂಗವ್ವಳ ಆಸ್ತಿ ಕಬಳಿಸಲು ಸುಳ್ಳು ಸಾಕಿ ನುಡಿಯುತ್ತಿದೆದೇನೆ ಅಂದರೆ ಸರಿಯಲ್ಲ .

<u>ಪಾಟೀ ಸವಾಲುಃ 2 ನೇ ಪ್ರತಿವಾದಿ ಪರ ವಕೀಲರು ಸಮಯ ಕೋರಿದ್ದರಿಂದ ಮುಂದುಡಲಾಯಿತು .</u>

(ಸಾಕ್ಷಿ ವಿಚಾರಣೆಯನ್ನು ನೆರವೇರಿಸಿದ್ದು , ಸಾಕ್ಷಿ ಹೇಳಿದ ಹೇಳಿಕೆಯನ್ನು ಬೆರಳಚ್ಚುಗಾರರಿಗೆ ಉಕ್ತ ಲೇಖನ ನೀಡಿ , ಅದನ್ನು ಗಣಕಿಕೃತಗೊಳಿಸಿದ ಮೇರೆಗೆ ದಾಖಲಿಸಲಾಯಿತು ).

ಓ ಹೇ ಕೇ ಸರಿ ಇದೆ.

ಹಿರಿಯ ದಿವಾಣಿ ನ್ಯಾಯಾಧೀಶರು
SAK ಬೈಲಹೊಂಗಲ.